## ಹಾಡೆ ಹಾದಿಯ ತೋರಿತು

‘ಹಾಡೆ ಹಾದಿಯ ತೋರಿತು’ (ಯೋಗೇಶ್ ಎಂ.ಎನ್., ಮಾ. 31) ಲೇಖನ ಸಾಕಷ್ಟು ಮಾಹಿತಿಗಳನ್ನು ಒಳಗೊಂಡಿದೆ. ಈ ಲೇಖನ ಓದುವಾಗಲೇ ‘ಮಹಾದೇಶ್ವರ ದಯ ಬಾರದೆ’ ಎಂಬ ಹಾಡನ್ನು ಮೊಬೈಲ್‌ನಲ್ಲಿ ನೋಡಿದೆ. ಈ ಹಾಡಿನಲ್ಲಿ ಮಹದೇಶ್ವರ ಜಾತ್ರೆಯನ್ನು ನೋಡಿದಷ್ಟೇ ಖುಷಿಯಾಯಿತು. ಹಿರಿಯ ಕಲಾವಿದರ ಸಲಹೆಯಂತೆ ಮಹಾದೇವಸ್ವಾಮಿ ಅವರು ಸ್ವಂತ ಬಂಡವಾಳದೊಂದಿಗೆ ಕ್ಯಾಸೆಟ್‌ಗಳನ್ನು ಮಾಡಿ ಇತಿಹಾಸವನ್ನು ಸೃಷ್ಟಿಸಿದ್ದು ಅವರ ಬುದ್ಧಿವಂತಿಕೆ ಮತ್ತು ಧೈರ್ಯವನ್ನು ತೋರಿಸುತ್ತದೆ.

—ಎನ್. ವೈದೇಹಿ, ಮೈಸೂರು

## ಮಾಲ್ಗುಡಿ ಮ್ಯೂಸಿಯಂ

‘ಮಾಲ್ಗುಡಿ ಮ್ಯೂಸಿಯಂ’ (ಎಚ್.ಎಸ್. ನವೀನ್‌ಕುಮಾರ್, ಏ. 7) ಲೇಖನ ಓದಿದೆ. ಅಲ್ಲಿ ಈ ಸಂಗ್ರಹಾಲಯವನ್ನು ‘ದಕ್ಷಿಣ ಮಧ್ಯ ರೈಲ್ವೆ’ ಮಾಡಿದೆ ಎಂಬ ಉಲ್ಲೇಖ ಇದೆ. ಇದು ತಪ್ಪು. ಈ ಸಂಗ್ರಹಾಲಯವನ್ನು ಮಾಡಿಸಿರುವುದು ನೈರುತ್ಯ ರೈಲ್ವೆ. ಅರಸಾಳು ರೈಲು ನಿಲ್ದಾಣವು, ಹುಬ್ಬಳ್ಳಿಯನ್ನು ಕೇಂದ್ರವಾಗಿ ಹೊಂದಿರುವ ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಅಡಿಯಲ್ಲಿ ಬರುತ್ತದೆ. ದಕ್ಷಿಣ ಮಧ್ಯ ರೈಲ್ವೆಯ ಕೇಂದ್ರಸ್ಥಾನವು ಹೈದರಾಬಾದಿನಲ್ಲಿದ್ದು ಆಂಧ್ರ ಮತ್ತು ತೆಲಂಗಾಣ ರಾಜ್ಯಗಳ ರೈಲುಗಳ ನಿರ್ವಹಣೆ ಮಾಡುತ್ತದೆ.

—ಜಿ.ಎಸ್.ಮಂಜುನಾಥ ಅಡಿಗ, ಬೆಂಗಳೂರು



## ಭತ್ತದ ಭಗೀರಥ

‘ಭತ್ತದ ಭಗೀರಥ’ (ನರೇಂದ್ರ ರೈ ದೇರ್ಲ, ಏ.7) ಲೇಖನ ಓದಿ ಆಶ್ಚರ್ಯವಾಯಿತು. ಸತ್ಯನಾರಾಯಣ ಬೆಳೇರಿಯವರು, 10 ಸೆಂಟ್ಸ್ ಜಾಗದಲ್ಲಿ ಗದ್ದೆ ಮಾಡಿ ನೂರಾರು ಭತ್ತದ ತಳಿಗಳನ್ನು ಸಂರಕ್ಷಿಸಿದ್ದಾರೆ ಎಂಬುದನ್ನು ನಂಬಲು ಸಾಧ್ಯವಾಗುತ್ತಿಲ್ಲ. ಈ ಅಪರೂಪದ, ಅಸಾಮಾನ್ಯ ವ್ಯಕ್ತಿಗೆ ಅಭಿನಂದನೆ.

—ಕೆ. ಗಣೇಶ ರಾಜ, ಬೆಂಗಳೂರು

## ನಕ್ಕರದೇ ಯುಗಾದಿ

‘ಮದ್ದಾನೆಗಳ ಗುದ್ದಾಟದಲ್ಲಿ ಬಾಳೆತೋಟ’ (ಎಂ.ಎಸ್. ನರಸಿಂಹಮೂರ್ತಿ, ಏ. 7) ಹಾಸ್ಯಬರಹ ಚೆನ್ನಾಗಿತ್ತು. ವಿಶ್ವನ ಹೋರಾಟ, ವಿಶ್ವ–ವಿಶಾಲು ಹಾರಾಟ ನಗೆ ತರಿಸಿತು. ಸಂತೋಷ್ ಸಸಿಹಿತ್ಲು ಅವರ ಚಿತ್ರಗಳೂ ನಗೆಬುಗ್ಗೆಯನ್ನು ಉಕ್ಕಿಸುವಂತೆಯೇ ಇವೆ.

—ಸುಮತಿ ಬಿ.

‘ಓದಿ ನಕ್ಕು ಹಗುರಾಗಿ’ ಎಂಬ ಟ್ಯಾಗ್ ಅಡಿಯಲ್ಲಿ ಬಂದಿರುವ ಲೇಖನಗಳು ಚೆನ್ನಾಗಿವೆ.

—ಪ್ರೇಮ್‌ಚಂದ್ ಬಸ್ತವಾಡ್

‘ಗುಂಡಿ ಗಂಡಾಂತರ’ (ಮಣ್ಣೆ ರಾಜು, ಏ. 7) ಹಾಸ್ಯಲೇಖನ, ಇಂದು ಬೆಂಗಳೂರು ನಗರದ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುವ ಮಧ್ಯಮ ವರ್ಗದ ಜನರು ಅನುಭವಿಸುವ ನಿತ್ಯ ಸತ್ಯಗಳನ್ನು ವಿನೋದಮಯವಾಗಿ ಬಿಂಬಿಸಿದೆ. ದಂಪತಿಗಳ ನಡುವಿನ ಹಾಸ್ಯಮಿಶ್ರಿತ ಸಂಭಾಷಣೆ ಒಮ್ಮೆ ನಕ್ಕು, ನಾವೂ ಹೀಗೆಯೇ ಆಡುವ ಜಗಳವನ್ನು ನೆನಪಿಸಿತು.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

ಏ. 7ರ ಸಂಚಿಕೆಯಲ್ಲಿ ಒಂದೆರಡು ಹಾಸ್ಯದ ಬರಹ ಬಿಟ್ಟರೆ ಬೇರೆ ಇಲ್ಲ. ಹಿಂದೆಲ್ಲ ಏಪ್ರಿಲ್ ತಿಂಗಳ ಮೊದಲ ಸಂಚಿಕೆ ತುಂಬ ಹಾಸ್ಯ ಲೇಖನಗಳು ಇರುತ್ತಿದ್ದವು. ಈಗ ಯಾಕೆ ಹೀಗೆ? ‘ಸುಧಾ’ಕ್ಕೂ ಸುಸ್ತಾಯ್ತಾ?

—ಕಾಂತರಾಜ್, ಹಾಸನ



ಲೇಖನ ತುಂಬ ಚೆನ್ನಾಗಿತ್ತು. ಮಾಲ್ಗುಡಿ ಡೇಸ್ ಕುರಿತಾಗಿ ಇನ್ನಷ್ಟು ಲೇಖನಗಳನ್ನು ಪ್ರಕಟಿಸಿ.

—ಶ್ರೀನಾಥ್ ಜಿ.

## ಬೂರುಗ ಬಂಗಾರ

‘ಬೂರುಗ ಬಂಗಾರ’ (ಮಲ್ಲಿಕಾರ್ಜುನ ಹೊಸಪಾಳ್ಯ, ಏ. 7) ಲೇಖನ ಚೆನ್ನಾಗಿದೆ. ಬಂಗಾರ ಬಣ್ಣದ ಹೂವುಗಳ ಬೂರುಗ ಮರ ಅಚ್ಚರಿ ಮೂಡಿಸಿತು. ಕರಾವಳಿ ಜಿಲ್ಲೆಗಳಲ್ಲಿ, ಕಡುಕೆಂಪು ಬಣ್ಣದ ಆಕರ್ಷಕ ಹೂಗಳನ್ನು ಬಿಡುವ ಬೂರುಗ ಮರಗಳನ್ನು ನೋಡಿದ್ದೆ. ಒಣಗಿದ ಕಾಯಿಗಳಲ್ಲಿರುವ ಹತ್ತಿಯು ಹಗುರ ಹಾಗೂ ನಯವಾಗಿರುವ ಕಾರಣ ಹತ್ತಿಯಿಂದ ಹಾಸಿಗೆ, ದಿಂಬುಗಳನ್ನು ತಯಾರಿಸುತ್ತಾರೆ.

—ಜಿ.ನಾಗೇಂದ್ರ ಕಾವೂರು, ಸಂಡೂರು

## ಮರಳಿ ಬಂದ ಸಂಗೀತಾ

‘ಮರಳಿ ಬಂದ ಸಂಗೀತಾ’ (ಪದ್ಮನಾಭ ಭಟ್, ಏ. 7) ಲೇಖನ ಚೆನ್ನಾಗಿದೆ. ಸಂಗೀತಾ ಭಟ್ ಪುನರಾಗಮನ ನಟಿ ಶ್ರುತಿ ಹರಿಹರನ್ ಅವರ ಒಂಟಿಧ್ವನಿಗೆ ಮತ್ತಷ್ಟು ಜೀವ ತುಂಬಿ ಗಟ್ಟಿ ಧ್ವನಿಯಾಗಿಸಿದೆ. ಅವಕಾಶಗಳೊಂದಿಗೆ ರಾಜಿ ಮಾಡಿಕೊಳ್ಳುವ ದೈನ್ಯತೆಗೆ ತಲೆಬಾಗದೆ, ಕೊನೆಗೂ ಅವಕಾಶಗಳೇ ಅವರ ಪಾಲಿಗೆ ಬಾಗಿಲು ತೆರೆದಿರುವುದು ಖಂಡಿತ ಬದಲಾದ ಕಾಲದ ಸೂಚನೆಯೇ ಹೌದು.

—ಎಚ್. ಸಿದ್ದಾರ್ಥ, ಉಡುಪಿ

## ಪಾಲನೆ ಪೋಷಣೆ

ಪ್ರತಿವಾರ ನೆಚ್ಚಿನ ‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ಸ್ವಯಂಪ್ರಭಾ ಅವರು ಬರೆಯುವ ‘ಪಾಲನೆ ಪೋಷಣೆ’ ತುಂಬಾ ಉಪಯುಕ್ತ ಅಂಕಣ. ಈಗಿನ ಕಾಲದಲ್ಲಿ ಮಕ್ಕಳನ್ನು ಬೆಳೆಸುವಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಅತ್ಯಂತ ಸೂಕ್ತವಾಗಿರುತ್ತವೆ.

—ಭಾರತಿ ಗಂಗಾಧರ್, ಬೆಂಗಳೂರು

## ಚಿತ್ತಾಗದಿರಲಿ ಚಿತ್ತ

‘ಚಿತ್ತಾಗದಿರಲಿ ಚಿತ್ತ’ (ಸುಮವೀಣಾ, ಏ. 7) ಸುಮಾವೀಣಾ ಬಹಳ ಉತ್ತಮವಾಗಿ ಮೂಡಿದೆ. ಮನಸಿನ ಭಾವನೆಗಳ ಪದರಗಳನ್ನು ಅಚ್ಚುಕಟ್ಟಾಗಿ ಬಿಚ್ಚಿಟ್ಟಿದ್ದಾರೆ.

—ಸು. ವಿಜಯಲಕ್ಷ್ಮಿ

## ಇರುವುದೊಂದೇ ಜೀವ

‘ಇರುವುದೊಂದೇ ಜೀವ’ (ಕಂನಾಡಿಗ ನಾರಾಯಣ, ಏ. 7) ಕಥೆ ಚೆನ್ನಾಗಿದೆ. ಈಗಲೂ ಎಷ್ಟೋ ಹೆಣ್ಣುಮಕ್ಕಳು ಶೋಷಣೆಗೆ ಒಳಗಾಗುತ್ತಾರೆ. ಕಥಾನಾಯಕಿ ‘ಎಷ್ಟೇ ಸ್ತ್ರೀ ಸ್ವಾತಂತ್ರ್ಯ ಎಂದರೂ ಹೆಣ್ಣುಮಕ್ಕಳು ಬದುಕಲು ಇನ್ನೂ ಕಾಲ ಪಕ್ವಗೊಂಡಿಲ್ಲ’ ಎಂದು ಆತ್ಮಹತ್ಯೆಗೆ ಪ್ರಯತ್ನಿಸಿ ನಂತರ ಮನಸ್ಸು ಬದಲಾಯಿಸಿದ್ದು ಚೆನ್ನಾಗಿ ಮೂಡಿಬಂದಿದೆ.

—ಪಿ. ಹೆಚ್. ಪಾಟೀಲ್, ರಾಣೆಬೆನ್ನೂರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in